ಓ ಎಸ್ ನಂಃ 40-22
ಪಿ ಡಬ್ಲ್ಯೂ ಃ 1

ದಿಃ 09-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದ

15. ಸರ್ವೆ ನಂ 43/1 ರಲ್ಲಿರುವ 2 ಎಕರೆ 14 1/2 ಗುಂಟೆ ಜಮೀನು ನನ್ನ ಮೈದುನನಾದ ನಾರಾಯಣಪ್ಪರವರ ಹೆಸರಿನಲ್ಲಿ ಖಾತೆ ಇರುತ್ತದೆ. ಸದರಿ 2 ಎಕರೆ 14 1/2 ಗುಂಟೆ ಪ್ರತ್ಯೇಕವಾದ ಜಮೀನಾಗಿರುತ್ತದೆ. ಸರ್ವೆ ನಂ 43/1 ರಲ್ಲಿ 4 ಎಕರೆ 29 ಗುಂಟೆ ಜಮೀನು ಜಯಮ್ಮ ಮತ್ತು ಸಂಜೀವಯ್ಯರವರ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸುಳ್ಳು. ನಾರಾಯಣಪ್ಪರವರ ಹೆಸರಿಗೆ ಸರ್ವೆ ನಂ 43/1 ರಲ್ಲಿ ಯಾವ ರೀತಿ 2 ಎಕರೆ 14 1/2 ಗುಂಟೆ ಜಮೀನು ಬಂತು ಎಂದು ಹೇಳಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಸರ್ವೆ ನಂ 43/1 ರಲ್ಲಿ 2 ಎಕರೆ 14 1/2 ಗುಂಟೆ ಜಮೀನು ಯಾವ ರೀತಿ ನಾರಾಯಣಪ್ಪರವರಿಗೆ ಖಾತೆ ಬಂದಿರುತ್ತದೆ ಎಂದು ಹೇಳಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸುಳ್ಳು.

16. ಸರ್ವೆ ನಂ 105 ರಲ್ಲಿ ನಾರಾಯಣಪ್ಪರವರ ತಂದೆ ವೆಂಕರಮಣಯ್ಯರವರಿಗೆ 5 ಎಕರೆ 17 ಗುಂಟೆ ಜಮೀನು ಇತ್ತು ಎಂದರೆ ಸರಿ. ನಾರಾಯಣಪ್ಪರವರಿಗೆ ಆರ್ ಆರ್ ನಂ 934 ರ ಪ್ರಕಾರ ಬಂದಿರುತ್ತದೆ ಎಂದರೆ ಇರಬಹುದು. ಸರ್ವೆ ನಂ 105 ರ ಜಮೀನು ಈಗಾಗಲೇ ಬೇರೆಯವರಿಗೆ ಮಾರಾಟವಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ 105 ನ್ನು ಕ್ರಯಕ್ಕೆ ಪಡೆದಿರುವ ವ್ಯಕ್ತಿಗಳನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರವನ್ನು ಕೂಡ ದಾವೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಹಾಗೆಯೇ ಸರ್ವೆ ನಂ 105, 43/1, 75/6 ರ ಖಾತೆ ಮತ್ತು ಪಹಣಿಯನ್ನು ನಾರಾಯಣಪ್ಪರವರ ಹೆಸರಿಗೆ ವರ್ಗಾವಣೆ ಮಾಡಿರುವುದನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಖಾತೆ ವರ್ಗಾವಣೆ ನನಗೆ ಗೊತ್ತಾಗದಂತೆ ಮಾಡಿರುತ್ತಾರೆ ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ. ನಾನು ಸದರಿ ಕುಟುಂಬಕ್ಕೆ ಸೇರದೇ ಇರುವ ಕಾರಣ ನಾನು ಈ ದಿನದವರೆಗೂ ಅದನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸುಳ್ಳು.

17. ಸರ್ವೆ ನಂ 20/2 ರಲ್ಲಿ ನಾನು ಒಟ್ಟು 2 ಎಕರೆ 13 ಗುಂಟೆಗೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸರ್ವೆ ನಂ 20/2 ರಲ್ಲಿ ಜಯಮ್ಮರವರಿಗೆ ಕ್ರಯವಾಗಿರುವುದು ಕೇವಲ 2 ಎಕರೆ ಎಂದರೆ ಗೊತ್ತಿಲ್ಲ. ಸರ್ವೆ ನಂ 20/2 ರಲ್ಲಿ ಜಯಮ್ಮ ಕೋಂ ನಾರಾಯಣಪ್ಪ ಮತ್ತು ವೆಂಕಟಾಚಲಯ್ಯರವರಿಗೆ ಒಟ್ಟು 13 ಗುಂಟೆ ಜಮೀನು ಇರುತ್ತದೆ ಎಂದರೆ ಭಾಗಕ್ಕೆ ಹೋಗಿರುತ್ತದೆ ಜಂಟಿಯಾಗಿರುವುದಿಲ್ಲ ಎಂದು

ನುಡಿಯುತ್ತಾರೆ. ಸದರಿ 13 ಗುಂಟೆ ಜಮೀನು ನಾರಾಯಣಪ್ಪರವರ ಕುಟುಂಬಕ್ಕೆ ಸೇರಿರುವುದಿಲ್ಲ ಬದಲಾಗಿ ವೆಂಕಟಾಚಲಯ್ಯರವರಿಗೆ ಸೇರಿರುತ್ತದೆ ಎಂದರೆ ಸುಳ್ಳು. ಸದರಿ 13 ಗುಂಟೆ ಜಮೀನಿನಲ್ಲಿ ವೆಂಕಟಾಚಲಯ್ಯರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಇರಬಹುದು ಎಂದು ನುಡಿಯುತ್ತಾರೆ.

18. ಸರ್ವೆ ನಂ 20/2 ರಲ್ಲಿ 2 ಎಕರೆ ಜಮೀನನ್ನು ಜಯಮ್ಮರವರು ನಂಜುಂಡಪ್ಪರವರ ಮಗ ವೆಂಕಟರಮಣಯ್ಯರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು ನನ್ನ ಯಜಮಾನರಾದ ನಂಜುಂಡಯ್ಯರವರು ಆ ಸಮಯಕ್ಕೆ ಬದುಕಿರಲಿಲ್ಲ. ವೆಂಕಟರಮಣಯ್ಯರವರು ಪಡೆದಿರುವಂತಹ ಸಾಲವನ್ನು ತೀರಿಸಲು ಜಯಮ್ಮರವರಿಗೆ ಸರ್ವೆ ನಂ 20/2 ರಲ್ಲಿ 2 ಎಕರೆ ಜಮೀನನ್ನು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ 2 ಎಕರೆ ಜಮೀನಿಗೆ ಜಯಮ್ಮರವರೇ ಹಕ್ಕುದಾರರೇ ಮತ್ತು ಅವರ ಸ್ವಾಧೀನದಲ್ಲಿರುತ್ತದೆ ಎಂದರೆ ಸುಳ್ಳು. ಸದರಿ ಕ್ರಯಪತ್ರದಂತೆ ಆರ್ ಆರ್ ನಂ 13 ರಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸುಳ್ಳು. ಸದರಿ ಸರ್ವೆ ನಂ 20/2 ರಲ್ಲಿರುವ 2 ಎಕರೆ ಜಮೀನು ಜಯಮ್ಮರವರಿಗೆ ಮಾತ್ರ ಸೇರುತ್ತದೆ ಎಂದರೆ ಸುಳ್ಳು.

19. ನಾರಾಯಣಪ್ಪರವರ ಅಣ್ಣ ನಂಜುಂಡಯ್ಯರವರು ಬುದ್ದಿಮಾಂದ್ಯ ವ್ಯಕ್ತಿ ಎಂದರೆ ಸರಿ, ಅವರ ಜೊತೆ ನನ್ನ ಮದುವೆಯಾಗಿರುತ್ತದೆ. ನಾರಾಯಣಪ್ಪರವರು ಬುದ್ದಿಮಾಂದ್ಯ ಆಗಿದ್ದ ಕಾರಣ ಅವರಿಗೆ ಮದುವೆ ಮಾಡಲಾಗಿರಲಿಲ್ಲ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ತಂಗಿಯ ಮಗಳನ್ನು ಮಗನಿಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ತಂಗಿಯ ಮಗಳನ್ನು ಮಗನಿಗೆ ಕೊಟ್ಟು ಮದುವೆ ಮಾಡಿಕೊಟ್ಟಿರುವ ವಿಷಯ ಸುಳ್ಳಾಗಿರುತ್ತದೆ ಎಂದು ಪ್ರತಿವಾದಿಗಳು ಹೇಳುತ್ತಾರೆ ಎಂದರೆ ಸುಳ್ಳು. ವೆಂಕಟರಮಣಯ್ಯರವರ 2 ನೇ ಮಗ ನಾರಾಯಣಪ್ಪ ಬೇಜವಾಬ್ದಾರಿ ಮನುಷ್ಯ ಎಂದರೆ ಸಾಕ್ಷಿಯು ಮನೆಯ ಯಜಮಾನ ಆಗಿರುವ ವ್ಯಕ್ತಿ ಜವಾಬ್ದಾರಿಯಿಂದ ಇರುತ್ತಾರೆ ಎಂದು ಹೇಳುತ್ತಾರೆ. ನಾರಾಯಣಪ್ಪರವರಿಗೆ ಜವಾಬ್ದಾರಿ ಇಲ್ಲದೇ ಇರುವ ಕಾರಣ ಜಯಮ್ಮರವರನ್ನು ನಾರಾಯಣಪ್ಪನಿಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ವೆಂಕಟರಮಣಯ್ಯರವರು ಮನೆಯ ಜವಾಬ್ದಾರಿಯನ್ನು ಜಯಮ್ಮರವರಿಗೆ ಹಸ್ತಾಂತರಿಸಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನಾರಾಯಣಪ್ಪರವರು ಸಾಯುವ 1 ವರ್ಷದ ಮುಂಚೆ ಜವಾಬ್ದಾರಿಯನ್ನು ಜಯಮ್ಮರವರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾರಾಯಣಪ್ಪರವರು ಸಾಯುವ 1 ವರ್ಷದ ಮುಂಚೆ ಜವಾಬ್ದಾರಿಯನ್ನು ಜಯಮ್ಮರವರಿಗೆ ನೀಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾರಾಯಣಪ್ಪರವರು ಯಾವಾಗ ತೀರಿಕೊಂಡಿರುತ್ತಾರೆ ನನಗೆ ಗೊತ್ತಿರುತ್ತದೆ, ಆದರೆ ನನಗೆ ದಿನಾಂಕ ಹೇಳಲು ಬರುವುದಿಲ್ಲ.

20. ನಾರಾಯಣಪ್ಪರವರಿಗೆ 3 ಜನ ಹೆಣ್ಣು ಮಕ್ಕಳು ಒಂದು ಗಂಡು ಮಗು ಎಂದರೆ ಸರಿ.

ನಾರಾಯಣಪ್ಪರವರ ಮಗ ತೀರಿಕೊಂಡಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**